**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೊನ್ನಾವರ**

**ಸಿ. ಸಿ. ನಂ. 69/2023**

**ಚಾ.ಸಾಃ 6, ಫ್ರಾ.ಸಾಃ 3**

| | |
|---|---|
| ಸಾಕ್ಷಿದಾರನ ಹೆಸರು | ಗುರುದತ್ತಾತ್ರಯ ಐಗಳ |
| ತಂದೆಯ ಹೆಸರು | ಹನುಮಂತ |
| ವಯಸ್ಸು | 52 ವರ್ಷಗಳು |
| ಉದ್ಯೋಗ | ರೈತಾಬಿ |
| ವಾಸ್ತವ್ಯ | ಹೊದ್ಕೆಶಿರೂರು, ಹೊನ್ನಾವರ ತಾಲೂಕು |

**ಸಾಕ್ಷಿಯನ್ನು ದಿನಾಂಕಃ 25-09-2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.**

**ಮುಖ್ಯ ವಿಚಾರಣೆಃ ಎಪಿಪಿಯವರಿಂದ,**

ನ್ಯಾಯಾಲಯದ ಮುಂದಿರುವ ಆರೋಪಿಯನ್ನು ನೋಡಿರುತ್ತೇನೆ.

ದಿನಾಂಕ 28-04-2023 ರಂದು ಸಂಜೆ 07-30 ಕ್ಕೆ ನಾನು ಮತ್ತು ಚಾಸಾ-1 ಚಂದಾವರ ಅರೆಅಂಗಡಿ ರಸ್ತೆಯ ನೂರಾನಿ ಕ್ರಾಸ್ ಹತ್ತಿರ ಶಾ-ಮಿಲ್ ಎದುರಿಗೆ ಮಾತನಾಡುತ್ತಾ ನಿಂತಿದ್ದೆವು. ಆ ಸಮಯಕ್ಕೆ 1 ನೇ ಆರೋಪಿ ಹೊನ್ನಾವರದಿಂದ ಚಂದಾವರ ಕಡೆಗೆ ಒಂದು ಮೋಟಾರು ಸೈಕಲನಲ್ಲಿ ಬರುತ್ತಿದ್ದರು. ಅದೇ ಸಮಯಕ್ಕೆ ಗಣೇಶ ತಿಮ್ಮು ಗೌಡ ಎನ್ನುವವರು ಚಂದಾವರದಿಂದ ಹೊನ್ನಾವರ ಕಡೆಗೆ ಹೋಗುತ್ತಿದ್ದರು. ಆದರೆ ಆರೋಪಿ ಬೈಕನ್ನು ಅತಿವೇಗವಾಗಿ ಚಲಾಯಿಸಿಕೊಂಡು ಬಂದು ಎದುರಿಗೆ ಬರುತ್ತಿದ್ದ ಗಣೇಶ ತಿಮ್ಮು ಗೌಡರವರ ಬೈಕಿಗೆ ಡಿಕ್ಕಿಪಡಿಸಿದರು. ತಕ್ಷಣ ಗಣೇಶ ತಿಮ್ಮು ಗೌಡ ರಸ್ತೆಯ ಮೇಲೆ ಬಿದ್ದರು. ನಂತರ ನಾವು ಅವರನ್ನು ಉಪಚರಿಸಿ ನೋಡಲಾಗಿ ಗಣೇಶ ಗೌಡರವರ ತಲೆಗೆ ಪೆಟ್ಟಾಗಿತ್ತು. ನಾನು ಆತನನ್ನು ಕುಮಟಾ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತೇನೆ. ನಂತರ ಆತನನ್ನು ಮಣಿಪಾಲ ಆಸ್ಪತ್ರೆಗೆ ಕರೆದುಕೊಂಡು ಹೋದರು.

ಅದಾದ 2-3 ದಿನಗಳ ನಂತರ ಗಾಯಾಳು ಮೃತಪಟ್ಟ ವಿಚಾರ ತಿಳಿಯಿತು. ಈ ಬಗ್ಗೆ ಪೋಲಿಸರಿಗೆ ಮರು ಹೇಳಿಕೆ ನೀಡಿರುತ್ತೇನೆ. ಆರೋಪಿತನು ಬೈಕನ್ನು ವೇಗವಾಗಿ ಚಲಾಯಿಸಿ ಬಲಕ್ಕೆ ತೆಗೆದುಕೊಂಡಿದ್ದರಿಂದಲೇ ಆತನ ತಪ್ಪಿನಿಂದಲೇ ಅಪಘಾತವಾಗಿರುತ್ತದೆ. ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರು ಗೈರು ಹಾಜರು, ಆರೋಪಿ ಸಮಯ ಕೋರಿದ್ದರಿಂದ ನೀಡಲಾಯಿತು.**

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

**Sd/-**

**ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**
**ಪ್ರ.ದ.ನ್ಯಾ.ದಂಡಾಧಿಕಾರಿಗಳು, ಹೊನ್ನಾವರ**